ನಾಗಮಂಗಲ ಪಟ್ಟಣಕ್ಕೆ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆ

1316 (933) ಶ್ರೀ ಎನ್ ಚಲುವರಾಯ ಸ್ವಾಮಿ (ನಾಗಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ನಾಗಮಂಗಲ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ನೀರು ಸರಬರಾಜು ಯೋಜನೆಯ ಬಾಕಿ ಉಳಿದಿರುವ ಕಾಮಗಾರಿಯನ್ನು ಯಾವಾಗ ಮುಗಿಸಲಾಗುತ್ತದೆ. ಈ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಆ) ನಾಗಮಂಗಲ ಪಟ್ಟಣದ ಒಳರಂಡಿ ವ್ಯವಸ್ಥೆ ಹದಗೆಟ್ಟಿರುವುದು ಮತ್ತು ಕೆಲವು ಕಡೆ ಹೊಸದಾಗಿ ಒಳಚರಂಡಿ ವ್ಯವಸ್ಥೆಯಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ನಾಗಮಂಗಲ ಪಟ್ಟಣಕ್ಕೆ ಸೂಳಿಕೆರೆಯಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ದಿನಾಂಕ 10.1.2002ರಂದು ಚಾಲನೆಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಉಳಿದಿರುವ ಕೆಲಸಗಳಿಂದರೆ ವಿತರಣಾ ಜಾಲದ ವೃದ್ಧೀಕರಣ ಮತ್ತು ನೌಕರರ ವಸತಿ ಗೃಹ ನಿರ್ಮಾಣ, ಇವುಗಳಲ್ಲಿ ವಿತರಣಾ ಜಾಲದ ವೃದ್ಧೀಕರಣ ಕಾಮಗಾರಿ ಪ್ರಾರಂಭಿಸಲಾಗಿದ್ದು ಮೇ ತಿಂಗಳ 2003 ನೇ ವೇಳೆಗೆ ಪೂರ್ಣಗೊಳಿಸಲಾಗುವುದು, ವಸತಿ ಗೃಹಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಆ) ಹಾಲಿ ನಾಗಮಂಗಲ ಪಟ್ಟಣಕ್ಕೆ ಯಾವುದೇ ರೀತಿಯ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಹಾಗೂ ಈ ಪಟ್ಟಣಕ್ಕೆ ಒಳಚರಂಡಿ ಯೋಜನೆಯ ಅವಶ್ಯಕತೆ ಇದ್ದು, ಯೋಜನೆಯನ್ನು ತಯಾರಿಸಲಾಗುತ್ತಿದೆ.

ಇ) ನಾಗಮಂಗಲ ಪಟ್ಟಣಕ್ಕೆ ಒಳಚರಂಡಿ ಯೋಜನೆಯ ಅಂದಾಜು ಪಟ್ಟಿ ತಯಾರಿಸಲು ಸರ್ವೆ ಕಾರ್ಯವನ್ನು ಕೈಗೊಂಡಿದ್ದು ಸದ್ಯದಲ್ಲೇ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮ ಜರುಗಿಸಲಾಗುವುದು.

ರಾಜ್ಯ ಸರ್ಕಾರವು ನಬಾರ್ಡ್ ಯೋಜನೆಯಡಿಯಲ್ಲಿ ವಿವಿಧ ಇಲಾಖೆಗಳಿಗೆ ಪಡೆದ ಹಣ

1318 (1639) ಶ್ರೀ ಚಂದ್ರಪ್ಪ ಎಂ. (ಭರಮಸಾಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ನಬಾರ್ಡ್ ಯೋಜನೆಯಡಿ RIDF 1 ರಿಂದ 8 ರವರೆಗೆ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಸಣ್ಣ ನೀರಾವರಿ ಹಾಗೂ ಇನ್ನಿತರೆ ಇಲಾಖೆಗಳಿಗೆ ಸರ್ಕಾರವು ಸಾಲ ಪಡೆದಿರುವ ಹಣ ಎಷ್ಟು;

ಆ) ರಾಜ್ಯ ಸರ್ಕಾರವು ನಬಾರ್ಡ್ ಯೋಜನೆಯಡಿ ಪಡೆದಿರುವ ಹಣಕ್ಕೆ ನೀಡಿದ ಬಡ್ಡಿ ಎಷ್ಟು?

ಇ) ಈ ಹಣವನ್ನು ಎಷ್ಟು ವರ್ಷಗಳಲ್ಲಿ ಮರುಪಾವತಿ ಮಾಡಲಾಗುವುದು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :